## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ, ಶಿಗ್ಗಾಂವ.

**ಫೌಜದಾರಿ ಪ್ರಕರಣ ಸಂಖ್ಯೆ 454/2022**

**ದೂರುದಾರರು** ಶ್ರೀ ಚನ್ನವೀರಪ್ಪ ತಂದೆ ಶಿವಮೂರ್ತೆಪ್ಪ ಅಕ್ಕಿ,
ಸಾಃ ಶಿಗ್ಗಾಂವ, ತಾಃ ಶಿಗ್ಗಾಂವ, ಜಿಃ ಹಾವೇರಿ.

**ವಿರುದ್ಧ**

**ಆರೋಪಿಃ** ಶ್ರೀ ಚಂದ್ರಪ್ಪ ತಂದೆ ದೇವಪ್ಪ ಬಸರಿಕಟ್ಟಿ
ಸಾಃ ಕಾಮನಹಳ್ಳಿ, ತಾಃ ಶಿಗ್ಗಾಂವ, ಜಿಃ ಹಾವೇರಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿದ್ದೇನೆ

ಪ್ರಶ್ನೆ 2) ಚಾಸಾ.1/ಫ್ರಾಸಾ.1 ಶ್ರೀ ಚನ್ನವೀರಪ್ಪ ತಂದೆ ಶಿವಮೂರ್ತೆಪ್ಪ ಅಕ್ಕಿ , ತಮ್ಮ ಸಾಕ್ಷ್ಯದಲ್ಲಿ ಆರೋಪಿತನಾದ ನೀನು ದಿನಾಂಕ 01.03.2021 ರಂದು ಪಿರ್ಯಾದಾರರ ಕಡೆಯಿಂದ ರೂ.90,000/- ಗಳನ್ನು ನಿನ್ನ ಮನೆಯ ಅಡಚಣೆಯ ಸಲುವಾಗಿ ಕೈಗಡ ಸಾಲ ತೆಗೆದುಕೊಂಡಿದ್ದು ಅದನ್ನು 2 ತಿಂಗಳ ಒಳಗಾಗಿ ಮರಳಿ ಕೊಡುವುದಾಗಿ ಪಿರ್ಯಾದಿದಾರರಿಗೆ ಆಶ್ವಾಸನೆ ಕೊಟ್ಟಿದ್ದು ಇದ್ದು, ನಂತರ ದಿಃ 17.06.2021 ರಂದು ಪಿರ್ಯಾದಿದಾರರು ಹಣ ಕೇಳಿದಾಗ ಆರೋಪಿತನಾದ ನೀನು ನಿನ್ನ ಸಿಂಡಿಕೇಟ ಬ್ಯಾಂಕ್ ಖಾತೆಯ ನಂ.12732200045414 ನೇದ್ದರ ಚೆಕ್ ನಂ.180374 ನೇದ್ದರಲ್ಲಿ ಚೆಕ್ ಮೊತ್ತ ರೂ.90,000/- ನಮೂದಿಸಿ ಚೆಕ್ಕನ್ನು ನೀಡಿದ್ದು ಅದನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ಸಾಕಷ್ಟು ಹಣ ಇರುವುದಿಲ್ಲ (Insufficient Funds) ಅಂತಾ ಹೇಳಿ ಸದರ ಬ್ಯಾಂಕಿನವರು ಪಿರ್ಯಾದಿಗೆ ಚೆಕ್ಕನ್ನು ದಿಃ 23.07.2021 ರಂದು ಮೆಮೋದೊಂದಿಗೆ ಮರಳಿ ನೀಡಿದ್ದು, ಪಿರ್ಯಾದಿಯು ತನ್ನ ವಕೀಲರ ಮುಖಾಂತರ ನಿಮಗೆ ನೋಟಿಸು ನೀಡಿದ್ದರೂ ಕೂಡ ಚೆಕ್ ಹಣವನ್ನು ನೀವು ಇಂದಿನವರಗೂ ಮರಳಿ ಕೊಟ್ಟಿರುವುದಿಲ್ಲಾ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?

ಉಃ

ಪ್ರಶ್ನೆ 3) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?

ಉಃ ನಾನು ಚೆಕ್ಕು ಕೊಟ್ಟಿರುತ್ತೇನೆ. ದೂರುದಾರರಿಂದ ಹಣ ಪಡೆದಿರುತ್ತೇನೆ ಆದರೆ ಹತ್ತಿ ಪಡೆದಿರುವುದಿಲ್ಲ.

ಪ್ರಶ್ನೆ 4) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉಃ ಹೌದು ಮಾಡಿಸುತ್ತೇನೆ. ಈ ದಿವಸ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಶಿಗ್ಗಾಂವ.
ದಿಃ 15.09.2025

ಹಿರಿಯ ಸಿವಿಲ್ ನ್ಯಾಯಾಲಯ
ಹಾಗೂ ಜೆ ಎಂ ಎಫ್ ಸಿ., ಶಿಗ್ಗಾಂವ.